Reg No. B G 155 16-7-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇಪಚ್ಚೆ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ದೇಶದಲ್ಲಿ ಧರ್ಮದರ್ಶಿ ಆಡಳಿತ ಜಾರಿಗೆ ಬರಲಿ

ಪಶ್ಚಿಮ ಬಂಗಾಳದಲ್ಲಿ

★

ಕಲ್ಕತ್ತಾ— ಇಲ್ಲೀವರೆಗೆ ಕೆಲವು ಮಂದಿ ನಕ್ಸಲೈಟರೂ ಸೇರಿ 1294 ಮಂದಿ ಸ್ಥಾನಬದ್ಧ ಶಾಸನದಂತೆ ದಸ್ತಗಿರಿ ಮಾಡಲ್ಪಟ್ಟಿರುವುದಾಗಿ ಶಾಸನಸಭೆಯಲ್ಲಿ ತಿಳಿಸಲಾಯಿತು.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ"ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವನೆಂದು ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಸಕ್ಕರೆ ಮೇಲಿನ ನಿರ್ಬಂಧ ಹೋಗಲಿ

ಬೆಂಗಳೂರು— ಸಕ್ಕರೆ ಹಂಚಿಕೆ ಮತ್ತು ಚಲನೆ ಮೇಲಿನ ನಿರ್ಬಂಧ ತೆಗೆಯಬೇಕೆಂದು ಭಾರತ ಆಹಾರ ಮಂತ್ರಿ ಮತ್ತಿತರ ಸಂಬಂಧಪಟ್ಟವರಿಗೆ ಮೈಸೂರು ರಾಜ್ಯದ ಕಬ್ಬು ಬೆಳೆಯುವ ಸಂಘವು ಮನವಿ ಅರ್ಪಿಸಿತು.

●

ಗಿರಿಯವರ ನಿರ್ಧಾರ

ನವದೆಹಲಿ — ಏನಾದರೂ ತಾವು ಅಧ್ಯಕ್ಷತೆಗೆ ಸ್ಪರ್ಧಿಸುವುದು ಖಂಡಿತವೆಂದು ಶ್ರೀ ವಿ ವಿ ಗಿರಿಯವರು ಪ್ರಧಾನಿಯವರಿಗೆ ತಿಳಿಸಿದುದಾಗಿ ವರದಿಯಾಗಿದೆ.

★

ದೇಶದಲ್ಲಿನ ರಾಜಕೀಯ

ದೇಶದಲ್ಲಿ ವಿವರಿಸಲಾದ "ಚಟುವಟಿಕೆ ರಾಜಕೀಯ" ವು 'ನಿಸ್ಸತ್ವದ ರಾಜಕೀಯ" ವಾಗಿದೆಯೆಂದು ಶ್ರೀ ಜಯಪ್ರಕಾಶ ನಾರಾಯಣರು ಹೇಳಿದರು — ತನಗೆ ಈ ವಿಷಯದಲ್ಲಿ ಬೇಜಾರಾಗಿದೆಯೆಂದೂ, ಈ "ಚಟುವಟಿಕೆ ರಾಜಕೀಯ' ಮೂಲಕ ತಾವು ಮಾಡಲಾಗದಿದೆ ಎಂದೂ ಹೇಳಿದರು

★

ಬ್ರಿಟನ್ನಿನಲ್ಲಿ ಕಳವಳ

ಲಂಡನ್— ಭಾರತ ಕಾಂಗ್ರೆಸ್ ಪಾರ್ಟಿಯಲ್ಲಿ ಆರ್ಥನೀತಿ ಮತ್ತು ಕೇಂದ್ರ ನ್ಯಾಯಕತ್ವ ಬಗ್ಗೆ ಉಂಟಾಗಿರುವ ಬಿಕ್ಕಟ್ಟು ಬ್ರಿಟನ್ನಿನ ರಾಜಕೀಯ ಮತ್ತು ಆರ್ಥಿಕ ವರ್ತುಳಗಳಲ್ಲಿ ಕಳವಳ ಉಂಟಾಗಿದೆ.

★

67 ನಾಮನಿರ್ದೇಶನ ಫಾರಂಗಳು

ನವದೆಹಲಿ — ಇಲ್ಲೀವರೆಗೆ ರಾಷ್ಟ್ರಾಧ್ಯಕ್ಷತೆ ಚುನಾವಣೆಗೆ 67 ನಾಮನಿರ್ದೇಶನ ಫಾರಂಗಳನ್ನು ಚುನಾವಣಾ ಕಮಿಷನರಿಂದ ಪಡೆಯಲಾಗಿದೆ.

ಮುಷ್ಕರ ನಿಲ್ಲುಲ್ಲ

ಹೈದರಾಬಾದು— 35 ದಿನಗಳಿಂದ ನಡೆಯಲಾಗುತ್ತಿರುವ ಎಂಜಿ ಮುಷ್ಕರ ನಿಲ್ಲಿಸಲು ಯೋಚಿಸಲಾಗಿದ್ದದ್ದು, ನಂತರ ಮುಂದುವರಿಸಲು ನಿರ್ಧರಿಸಲಾಯಿತು.

* ಹಣಕಾಸು ಶಾಖೆಯನ್ನು ಪ್ರಧಾನರು ವಹಿಸಿಕೊಂಡಿದ್ದರಿಂದ ಶ್ರೀ ಮುರಾರ್ಜಿ ರಾಜೀನಾಮೆ ಇತ್ತರು.

★

ಬಿಕ್ಕಟ್ಟಿಗೆ ಪರಿಹಾರ

ನಾಗಪುರ— ಕೇಂದ್ರದಲ್ಲಿ ಬಿಕ್ಕಟ್ಟಾದರೆ, ರಾಷ್ಟ್ರಾಧ್ಯಕ್ಷರು ಪಾರ್ಲಿಮೆಂಟನ್ನು ವಿಸರ್ಜಿಸಿ ಆಡಳಿತವನ್ನು ತಾವು ವಹಿಸಿಕೊಂಡು, ಒಂದು ಹಂಗಾಮಿ ಸಮಿತಿಯ ಸಹಾಯದಿಂದ ದೇಶೂ ರಾಜ್ಯಭಾರ ನಡೆಸಬೇಕೆಂದು ಶ್ರೀ ಜಯಪ್ರಕಾಶ ನಾರಾಯಣರು ಹೇಳಿದರು.

★

ಉದ್ಯೋಗಗಳ ರದ್ದು

ಮಡಕೆರಿ— ಸ್ಥಳೀಯ ಆಹಾರ ಕಚೇರಿಯಲ್ಲಿ ಒಬ್ಬ ತಾಸಿಲ್ದಾರ್, 3 ಸಿರಸ್ತೇದಾರ್, ಒಬ್ಬ ಟೈಪಿಸ್ಟಿನ ಉದ್ಯೋಗಗಳು ಸರಕಾರಿ ಆಜ್ಞೆಯಂತೆ ವಜಾ ಮಾಡಲ್ಪಡಲಾಗಿದೆ.

★

ಗಗನಯಾನಿಗಳಿಗೆ ಸಂಗೀತ

ನ್ಯೂಯಾರ್ಕು— ಅಪೊಲೊ 11 ರಲ್ಲಿ ಚಂದ್ರನಲ್ಲಿಗೆ ಇಂದು ಹೊರಟ ಗಗನಯಾನಿಗಳಿಗೆ, ಅವರು ಭಾನುವಾರ ಚಂದ್ರನಲ್ಲಿ ಇಳಿಯುವಾಗ, ಸಂಗೀತಗಾರ ಮತ್ತು ಬ್ಯಾಂಡು ನಾಯಕ ಡೂಕ್ ಎಲಿಂಗ್ಟನ್ 'ಸೂಟ್ ಮೇಡ್' ಸಂಗೀತ ಹಾಡುವನು

ಧರ್ಮದರ್ಶಿತ್ವ ಪ್ರಜಾರಾಜ್ಯ

ದೇಶದಲ್ಲಿ ಹೆಚ್ಚುತ್ತಿರುವ ಹಿಂಸಾತ್ಮಕತೆ, ಭ್ರಷ್ಟಾಚಾರ, ಅನ್ಯಾಯಗಳಿಗೆ ಈಗಿನ ರಾಜ್ಯಾಂಗ ಪ್ರಜಾಪ್ರಜಾಪ್ರಭುತ್ವವನ್ನು ಗಾಂಧೀಜೀಯವರು ಯೋಚಿಸಿದ್ದ ಧರ್ಮದರ್ಶಿತ್ವ ಪ್ರಜಾಪ್ರಭುತ್ವಕ್ಕೆ ಬದಲಾಯಿಸುವುದೊಂದೇ ಪರಿಹಾರ ಮಾರ್ಗವೆಂದು ಶ್ರೀ ಜಯಪ್ರಕಾಶ ನಾರಾಯಣರು ಅಭಿಪ್ರಾಯ ವ್ಯಕ್ತಪಡಿಸಿರುವರು.

●

ಮುಷ್ಕರ ಬಿದಿರಿಕೆ

ಬಳ್ಳಾರಿ— ತಮ್ಮ ವಿವಿಧ ಕೇಳಿಕೆಗಳನ್ನು ನೆರವೇರಿಸದಿದ್ದರೆ ತಾ|| 26 ರಿಂದ ಸ್ಯಾನಿಟರಿ ಕಾರ್ಮಿಕರನ್ನು ಪ್ರತಿನಿಧಿಸುವ ಪೌರಸಭಾ ನೌಕರ ಸಂಘ ನೋಟೀಸು ಕೊಟ್ಟಿದೆ.

★

ಭಾರತಕ್ಕೆ ಗೋಧಿ

ಬೊಂಬಾಯಿ— ಭಾರತಕ್ಕೆ ಡೆನ್ಮಾರ್ಕು ಉದಾರ ದಾನ ನೀಡಿದ 6850 ಟ್ಯ ಗೋಧಿಯು ನಿನ್ನೆ ಹಡಗಿನಲ್ಲಿ ಬಂತು — ಕಳೆದ ವಾರ ಒಂದು ಭಾಗ 3400 ಟ್ಯ ಗೋಧಿ ಬಂದಿತು.

★

ಸಿ ಡಿ ದೇಶ್ ಮುಖರ ಅಭಿಪ್ರಾಯ

ಮದರಾಸು— ಬ್ಯಾಂಕುಗಳ ರಾಷ್ಟ್ರೀಕರಣಕ್ಕಿಂತ ಉಪಪ್ರಧಾನಿ ಶ್ರೀ ದೇಸಾಯರ ಸಮಾಜ ಹತೋಟಿ ಸರಿಯಾಗಿದೆಯೆಂದು ಮಾಜಿ ಆರ್ಥ ಮಂತ್ರಿ ಶ್ರೀ ಸಿ ಡಿ ದೇಶ್ ಹೇಳಿರುವರು — ಶೇವಣಿಗಳು ದುರುಪಯೋಗವಾಗಬಹುದೆಂದೂ ಹೇಳಿದರು.

★

ಇಬ್ಬರೂ ದೂಷಾರ್ಹರು

ಬೆಂಗಳೂರು— ಅಧ್ಯಕ್ಷತೆಗೆ ಕಾಂಗ್ರೆಸ್ ಪಾರ್ಟಿ ಉಮೇದುವಾರರ ಆಯ್ಕೆ ಬಗ್ಗೆ ಹುಟ್ಟಿರುವ ವಾಗ್ವಾದದ ವಿಷಯದಲ್ಲಿ ಎರಡು ಕಡೆಯವರೂ ದೂಷಾರ್ಹರೆಂದು ಪಾರ್ಲಿಮೆಂಟು ಸದಸ್ಯ ಶ್ರೀ ಚಂದ್ರಶೇಖರರು ಹೇಳಿದರು.

ಪೂರಿ ಜಗದ್ಗುರುಗಳ ಭಾಷಣ
500 ಹರಿಜನರ ಪ್ರದರ್ಶನ

ಅಮೃತಸರದ ಗೋಲ್‌ಬಾಗ್‌ನಲ್ಲಿ, ತಮ್ಮ ವಿರುದ್ಧ 500 ಹರಿಜನರೂ ಮುಡಕಟ್ಟಿನವರೂ ಪ್ರದರ್ಶನ ನಡೆಸಿದರೂ, ಪೂರಿ ಶಂಕರಾಚಾರ್ಯರು ನಾಗರೀಕ ಅಧಿಕಾರ್ ಪರಿಷತ್ತಿನ ಆಶ್ರಯದಲ್ಲಿ-ಈಚೆಗೆ ಒಂದು ಬಹಿರಂಗ ಸಭೆಯಲ್ಲಿ ಭಾಷಣ ಮಾಡಿದರು. ಅನೇಕ ಮಹಿಳೆಯರೂ ಸೇರಿ 50 ಸಾವಿರಕ್ಕೂ ಹೆಚ್ಚುಮಂದಿ ನೆರೆದಿದ್ದರು. ಪ್ರದರ್ಶನಕಾರರನ್ನು ಹೆಚ್ಚು ಪೋಲೀಸು ಪಡೆ ತಡೆದಿತ್ತು ; ಆದರೂ ಹೊರಗಿನ ಬೀದಿಗಳಲ್ಲಿ ಘೋಷಣೆ ಕೂಗುತ್ತಿದ್ದರು. ಬಹಿರಂಗ ಸಭೆಯಲ್ಲಿ ಪೋಲೀಸರ ಮತ್ತು ಸ್ವಯಂಸೇನಕರುಗಳ ಭದ್ರವಾದ ಕಾವಲಿತ್ತು. ಅನೇಕ ಮಹಿಳೆಯರೂ ಇದ್ದ ಪ್ರದರ್ಶನಕಾರರು ಲಾಠಿ ಹಿಡಿದಿದ್ದರು.

40 ನಿಮಿಷಗಳು ಕಾಲ ಶ್ರೀ ಶಂಕರಾಚಾರ್ಯರು ಭಾಷಣಮಾಡಿ– ತಾವು ಹರಿಜನರನ್ನೂ ಹಿಂದೂ ಸಮಾಜದ ಭಾಗವೆಂದೂ, ಹಿಂದೂಸಮಾಜದಲ್ಲಿ ಅವರು ತಮ್ಮದೇ ಆದ ಗೌರವಸ್ಥಾನವನ್ನು ಪಡೆದಿರುವರೆಂದೂ, ತಾವು ಅವರ ಬಗ್ಗೆ ಗೌರವ ಹೊಂದಿರುವುದಾಗಿಯೂ ತಿಳಿಸಿದರು. ಆದಾಗ್ಯೂ ಅವರು ಹಿಂದೂ ಸಮಾಜ ಪ್ರತಿಪಾದಿಸುವ ವರ್ಣಾಶ್ರಮವನ್ನು ದೃಢೀಕರಿಸಿ, ಯಾವುದಾದರೂ ವಿದೇಶಿ ಶಕ್ತಿಗೆ ಭಾರತವನ್ನು ಆಡವುಹೊಕಬಲ್ಲ ಸ್ಥಾನಗಳೂ ತರಗತಿಗಳೂ ಇಲ್ಲದ ಸಮಾಜವನ್ನು ಬೆಂಬಲಿಸುವ ಮತ್ತು ವಾದಿಸುವವರನ್ನು ದೂಷಿಸಿದರು. (ಸ್ಟೇಟ್ಸ್‌ಮನ್)

ಗಾಂಧೀಜೀ ಅಮೃತವಾಣಿ

ಎಲ್ಲಾ ಪಾಪಗಳನ್ನೂ ಗುಟ್ಟಿನಲ್ಲಿ ಮಾಡಲಾಗುತ್ತಿದೆ. ಆದರೆ ಭಗವಂತನು ನಮ್ಮಂತರಂಗದ ಸಾಕ್ಷಿಯಾಗಿದ್ದಾನೆ ಎಂಬ ಅರಿವು ನಮಗೆ ಮೂಡಿದ ಕೂಡಲೇ ನಾವು ಮುಕ್ತ ಜೀವಿಗಳಾಗುತ್ತೇವೆ.



Protect the Cow

ಗೋರಕ್ಷಣೆಗೆ ಬೆಂಬಲ ಕೊಡಿ

SHAKTI SUDHA

A Superb Tonic

ವುಡ್‌ಲ್ಯಾಂಡ್ಸ್

ಅಮೋಘ 2 ನೇ ವಾರ

ಉತ್ತರ ಭಾರತದಲ್ಲಿ ಕೋಲಾಹಲ ಎಬ್ಬಿಸಿರುವ ಅನೇಕ ಆಶ್ಚರ್ಯ ವಿಷಯಗಳಿಂದ ಕೂಡಿದ ಅತ್ಯಮೋಘ ಹಿಂದಿ ಚಿತ್ರ ನೀವು ನೋಡಲು ತಪ್ಪಿಸಿರಿ

ಅನೋಖಿರಾತ್

ಸಂಗೀತ – ರೋಷನ್

ತಾರಾಗಣ : ಸಂಜೀವ ಕುಮಾರ್ ಜಹೀದ ತರುಣ ಬೋಸ್ ಮುಖ್ರಿ ಮುಂತಾದವರು

[ದಿನ 3 ಪ್ರದರ್ಶನಗಳು]

ಆಪೆರಾ— 11-7-69 ರಿಂದ

ಅಮೋಘ ಆಕರ್ಷಣೀಯ ಕನ್ನಡ ಚಿತ್ರ — ಕಥೆ-ಸಂಭಾಷಣೆ : ತ. ರಾ. ಸು.

ಪುನರ್ಜನ್ಮ

ನಟವರ್ಗ— ರಾಜಕುಮಾರ್, ಬಾಲಕೃಷ್ಣ, ಜಯಂತಿ, ಚಂದ್ರಕಲಾ ಜಯಶ್ರೀ, ರಮಾ, ರಂಗ, ಸತ್ಯ

ದಿನ 3 ಆಟಗಳು

Golden Jubilee of 'Satyavadi'

The golden jubilee of the 'Satyavadi' is to be celebra very soon

The President, the Prime Minister, H H. the Maharaja Mysore, and other personages have extended messages of felicitations and good wishes. Sri Sringeri and Sri Dwarake Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah Sri Madhav Shenoi, Sri Opera Talkies Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Help The Gorakshana

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4